**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.**

**OS No. 161/2017**

**PW: 1**

**ದಿನಾಂಕ 12-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 2 ರವರ ಪರ ಶ್ರೀ. ಎಸ್.ಜೆ.ಕೆ ವಕೀಲರಿಂದ :**

ಸೋಮ ನನ್ನ ಮಾವ. ಅವರಿಗೆ ಇಬ್ಬರು ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು. ಗಂಡು ಮಕ್ಕಳು ಎಂದರೆ ನನ್ನ ಗಂಡ ರಮೇಶ ಮತ್ತು ಇನೊಬ್ಬ ಸುರೇಶ ಅಂತಾ ಇರುತ್ತಾರೆ. ಸುರೇಶನ ವಿರುದ್ಧ ಈ ದಾವೆಯನ್ನು ದಾಖಲಿಸಿಲ್ಲ ಎಂದರೆ ಸರಿ. ನನ್ನ ಮಾವ ಸೋಮನ ಹೆಸರಿಗೆ 9 ಎಕರೆ ಜಮೀನು ಇರುತ್ತದೆ. ಅದರ ಪೈಕಿ 1ನೇ ಪ್ರತಿವಾದಿ ಹೆಸರಿಗೆ 4 ಎಕರೆ, ಸುರೇಶ ಹೆಸರಿಗೆ 5 ಎಕರೆ ಜಮೀನು ಇರುತ್ತದೆ. ಸದರಿ 5 ಎಕರೆ ಸುರೇಶನ ಹೆಸರಿಗೆ ಇದ್ದ ಜಮೀನಿನಲ್ಲಿ ಈ ದಾವೆಯಲ್ಲಿ ಪಾಲು ಕೇಳಿಲ್ಲ ಎಂದರೆ ಸರಿ. ದಾವೆಯಲ್ಲಿ ನನ್ನ ಮಾವ ಸೋಮನ ಹೆಣ್ಣು ಮಕ್ಕಳು 1ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿಯಲ್ಲಿ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಅಂತಾ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ನನ್ನ ಮಾವ ಸೋಮನಿಗೆ ಹೇಗೆ ಬಂತು ಅಂತಾ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1ನೇ ಪ್ರತಿವಾದಿ ಜಮೀನು ಮಾರಾಟ ಮಾಡಿ ಬಂದ ಹಣವನ್ನು ತನ್ನ ಕುಟುಂಬಕ್ಕೆ ವಿನಿಯೋಗ ಮಾಡಿಕೊಂಡಿದ್ದ ಎಂದರೆ ಸರಿ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಅಂತಾ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಪಾಲು ಇರುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1ನೇ ಪ್ರತಿವಾದಿಯ ಸ್ವಯರ್ಜಿತ ಆಸ್ತಿ ಇದ್ದು, ಹಾಗಾಗಿ ಅದರಲ್ಲಿ ನಮಗೆ ಪಾಲು ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಮ್ಮೊಂದಿಗ ವಾಸವಾಗಿರುತ್ತೇನೆ. ಖರೀದಿ ವಿಷಯ ನಮಗೆ ಮುಂಚೆಯೇ ಗೊತಿತ್ತು ಎಂದರೆ ಸಾಕ್ಷಿ ಆ ನಂತರ ಗೊತ್ತಾಯಿತು ಅಂತಾ ನುಡಿಯುತ್ತಾರೆ. 2ನೇ ಪ್ರತಿವಾದಿ ದಾವಾ ಅಸ್ತಿ ಖರೀದಿ ಮಾಡಿದ್ದು, ಆತನಿಗೆ ಕಿರುಕೂಳ ಕೊಡಬೇಕೆಂಬ ದುರುದ್ದೇಶದಿಂದ ಖೊಟ್ಟಿ ದಾವೆಯನ್ನು ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೆ. ಸರಿ ಇದೆ.**

**ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಇಂಡಿ.**